

ಸಾಂದರ್ಭಿಕ ಚಿತ್ರಗಳು

ಬಂದು ನಮ್ಮ ಕ್ಯಾಂಪಿನ ಸುತ್ತಲಿರುವ ಆನೆ ತಡೆ ಕಂದಕದ ಒಂದು ಮೂಲೆಯಿಂದ ನೆಗೆದು ಕ್ಯಾಂಪಿನ ಅಂಗಳದಲ್ಲಿ ಬಂದು ನಿಂತಿತು.

ನಿಲ್ಲಲಾಗದಷ್ಟು ನಿತ್ರಾಣಗೊಂಡಿತ್ತು. ಜಿಂಕೆಯನ್ನು ಬೆಂಬಿಡದೆ ಬಂದಿದ್ದ ಕೆನ್ನಾಯಿಗಳೀಗ ಕಂದಕದ ಹೊರಭಾಗದಲ್ಲಿ ತಮ್ಮ ನಾಲಿಗೆ ಹೊರತೆಗೆದು ಜೊಲ್ಲು ಸುರಿಸುತ್ತಿದ್ದವು.

ಬಡಪಾಯಿ ಜಿಂಕೆ ನೋಡಿದ ನನಗೋ ಮರುಕ. ತಲೆಯಲ್ಲಿ ಏನೇನೋ ಓಡುತ್ತಿತ್ತು. ನಾಯಿಗಳನ್ನೆಲ್ಲ ಓಡಿಸಿ ಜಿಂಕೆಯನ್ನು ಕಾಪಾಡಬೇಕೆಂಬ ಮನಸ್ಸಾದರೂ ನಾನು ಹಾಗೆ ಮಾಡಲಿಲ್ಲ. ಇದು ಅರಣ್ಯ, ಇಲ್ಲಿನ ನಿಯಮವೇ ಬೇರೆ. ಬಲಿಷ್ಠ ಪ್ರಾಣಿ ದುರ್ಬಲ ಪ್ರಾಣಿಯನ್ನು ತನ್ನ ಬಲಿಯಾಗಿಸಿಕೊಳ್ಳುತ್ತದೆ. ಹಸಿದ ಹೊಟ್ಟೆ ತುಂಬಬೇಕು. ಇಲ್ಲಿ ಹಸಿವಿಗಾಗಿ ಯಾವುದು ಯಾವುದನ್ನು ಕೊಂದರೂ ಪಾಪ ತಟ್ಟುವುದಿಲ್ಲ. ಇದು ಅರಣ್ಯನ್ಯಾಯ. ಜಿಂಕೆಯನ್ನು ಕೆನ್ನಾಯಿಗಳು ತಿನ್ನುತ್ತವೆ; ಕೆನ್ನಾಯಿಗಳನ್ನು ಹುಲಿಯೋ ಚಿರತೆಯೋ ಮುಗಿಸುತ್ತದೆ; ಹುಲಿ ಚಿರತೆಯ ಬಲಿಗಾಗಿ ಇನ್ನಾವುದೋ ಪ್ರಾಣಿ ಕಾದು ಕೂತಿರುತ್ತದೆ. ಒಂದನ್ನೊಂದು ತಿಂದು ಜೀವಿಸಬೇಕು. ಇದು ಕೇವಲ ಹಸಿವಿನ ಲೆಕ್ಕಾಚಾರ.

ಯಾರೋ ಒಬ್ಬ ತನ್ನ ಹಣ–ಅಂತಸ್ತು, ಐಶ್ವರ್ಯ, ಅಧಿಕಾರದ ಮದದಿಂದ ಯಾರನ್ನೋ ಬಲಿಪಶುವಾಗಿಸುತ್ತಾನೆ, ಸುಲಿಗೆ ಮಾಡುತ್ತಾನೆ, ದುರ್ಬಲನನ್ನು ಹೊಡೆಯುತ್ತಾನೆ, ಬಡಿಯುತ್ತಾನೆ. ಕೊಚ್ಚಿ ಕೊಂದು ಹಾಕುತ್ತಾನೆ. ನಾವು ನೋಡಿದರೂ ನೋಡದಂತೆ ಸುಮ್ಮನಿರುತ್ತೇವೆ. ಈ ಮೂಲಕ ನಾವು ಅರಣ್ಯನ್ಯಾಯವನ್ನು ಪೋಷಿಸುತ್ತೇವೆ. ಇಲ್ಲದಿದ್ದರೆ ನಾವು ಇಲ್ಲವಾಗುತ್ತೇವೆಂಬ ಭಯ ನಮಗೆ. ಕೊಲ್ಲುವುದನ್ನು ತಡೆಯುತ್ತೇವೆಯೇ? ಇಲ್ಲ! ನಮಗೇಕೆ ಬೇರೆಯವರ ಉಸಾಬರಿ ಎಂದು ಸುಮ್ಮನಾಗುವುದೇ ನಮ್ಮ ಜಾಯಮಾನ. ಕಾಲ ಎಲ್ಲರ ಕಾಲೆಳೆಯುತ್ತದೆ. ಎಂದಾದರೊಮ್ಮೆ ನಮಗೂ ಈ ಪರಿಸ್ಥಿತಿ ಬಂದೊದಗಬಹುದು... ವಿಲವಿಲಿಸುವ ಜಿಂಕೆ ಕಂಡು ನನ್ನ ತಲೆಯಲ್ಲಿ ವಿಚಿತ್ರ ವಿಚಾರಗಳು ಓಡುತ್ತಿದ್ದವು.

ಅತ್ತ ಕತ್ತು ಹೊರಳಿಸಿ ನೋಡಿದೆ. ಹೊಂಚು ಹಾಕಿ ಕುಳಿತ ಆ ಕೆನ್ನಾಯಿಗಳ ಕಣ್ಣಲ್ಲಿ ಕಾಣುತ್ತಿದ್ದುದೇನು? ವ್ಯಗ್ರತೆ!

ಅದರ ಮಟ್ಟಿಗೆ ಅದು ಕೇವಲ ಹಸಿವಿನ ಅಭಿವ್ಯಕ್ತಿ. ಜಿಂಕೆಯ ಕಣ್ಣೊಳಗೆ, ಅದರ ದೈನ್ಯತೆಯ ಮುಖದಲ್ಲಿ ಕಾಣುತ್ತಿದ್ದುದು ಘೋರ ಜೀವಭಯ ಮತ್ತು ಅಸಹಾಯಕತೆ. ಹಸಿವು ಮತ್ತು ಜೀವಪ್ರೀತಿಯ ತುಡಿತದ ಮಧ್ಯದ ಸಂಘರ್ಷವದು. ಮನಸ್ಸು ಕೇಳದೇ ಕೆನ್ನಾಯಿಗಳ ಬಾಯಿಯಿಂದ ಜಿಂಕೆಯನ್ನು ರಕ್ಷಿಸಿದರೆ ಅಷ್ಟೂ ನಾಯಿಗಳ ಊಟ ಕಸಿದುಕೊಂಡ ಪಾಪ ನನಗೆ ತಟ್ಟದೇ ಬಿಡುವುದಿಲ್ಲ. ಹಾಗೆಂದು ಸಾಧು ಸ್ವಭಾವದ ಜಿಂಕೆಯ ಸಾವನ್ನು ನೋಡುತ್ತ ಸುಮ್ಮನೆ ನಿಲ್ಲಲೂ ಆಗುವುದಿಲ್ಲ. ಉಭಯ ಸಂಕಟಕ್ಕೊಳಗಾದೆ. ಏನೂ ಮಾಡದೇ ಸುಮ್ಮನಿದ್ದರೂ ನನ್ನಿಂದ ತಪ್ಪೊಂದು ಘಟಿಸಿದಂತೆಯೇ. ಹೀಗೆ ಯೋಚಿಸುತ್ತಿದ್ದವನನ್ನು ಜಿಂಕೆಯ ಆರ್ತನಾದ ಬಡಿದೆಚ್ಚರಿಸಿತು.

ಅಂಗಳದಲ್ಲಿದ್ದ ಜಿಂಕೆಯನ್ನು ಯಾವ ಕ್ಷಣದಲ್ಲೋ ಆ ಕೆನ್ನಾಯಿಗಳ ನಾಯಕ ಹೊರಗೆ ಓಡಿಸಿದ್ದ. ನೋಡನೋಡುತ್ತಲೇ ಕೆನ್ನಾಯಿಗಳ ಗುಂಪು ಜಿಂಕೆಯನ್ನು ಕೆಳಗೆ ಉರುಳಿಸಿದವು. ರಕ್ತದ ಮಡುವಲ್ಲಿ ಬಿದ್ದ ಜಿಂಕೆ ಮೇಲೇಳಲಾಗದೆ ಸಾವಿನ ಕೊನೆಯ ಬಿಕ್ಕಳಿಕೆಯಲ್ಲಿ ನರಳುತ್ತಿದ್ದರೆ, ಹಸಿದ ಕೆನ್ನಾಯಿಗಳೆಲ್ಲ ಜೀವಂತ ಪ್ರಾಣಿಯನ್ನೇ ಹರಿದು ದೇಹ ಬಗೆದು ಮಾಂಸ ತಿನ್ನುತ್ತಿದ್ದವು. ನೋಡುಗರ ಎದೆ ಒಡೆದು ನೀರಾಗುವಂತೆ!

ಕೆನ್ನಾಯಿಗಳು ಎಲ್ಲ ಪ್ರಾಣಿಗಳಂತಲ್ಲ. ತೀರಾ ಕ್ರೂರ. ಹುಲಿ, ಚಿರತೆ, ತೋಳದಂತಹ ಮಾಂಸಾಹಾರಿ ಪ್ರಾಣಿಗಳು ಯಾವುದೇ ಬಲಿಪ್ರಾಣಿಯನ್ನು ಮೊದಲು ಕೊಂದು, ನಂತರ ಮೃತ ಪ್ರಾಣಿಯ ಮಾಂಸ ಭಕ್ಷಿಸುತ್ತವೆ. ಕೆನ್ನಾಯಿಗಳದು ಹಸಿವಿನ ಹಾಹಾಕಾರವೋ? ತೀರದ ಹಸಿವಿನ ಘೋರತೆಯೋ? ಇಲ್ಲವೇ ಕ್ರೌರ್ಯದ ಅಟ್ಟಹಾಸವೋ? ಅವು ಜೀವಂತ ಪ್ರಾಣಿಯನ್ನೇ ಹಸಿಹಸಿಯಾಗಿಯೇ ತಿನ್ನುತ್ತವೆ.

ತನ್ನ ದೇಹದ ಒಂದೊಂದು ಭಾಗವು ರಕ್ಕಸ ನಾಯಿಗಳಿಗೆ ಹರಿದು ಹಂಚಿ ಹೋಗುವಾಗ ಜಿಂಕೆಗೆ ಎಷ್ಟು ಯಾತನೆಯಾಗಿರುತ್ತದೆ? ಇಷ್ಟಿಷ್ಟೇ ಜೀವ ಹೋಗುವವರೆಗೂ ಅದರ ಆತ್ಮ ಅದೆಷ್ಟು ನೋವು ತಿಂದಿರುತ್ತದೆ; ಜಿಂಕೆಗೆ ನರಕ ಸದೃಶ ಗಳಿಗೆಗಳವು. ಕೆನ್ನಾಯಿಗಳಿಗೋ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಧಾವಂತ. ಬಲಿಪ್ರಾಣಿಯ ಜೀವವಿದ್ದರೆಷ್ಟು, ಬಿಟ್ಟರೆಷ್ಟು. ನಾಯಿಗಳಿಗದು ಮಾಂಸದ ಮುದ್ದೆಯಷ್ಟೇ.

ಅದೊಂದು ಘಟನೆ ಯಾವಾಗಲೂ ಸ್ಮೃತಿಪಟಲದಿಂದ ಮರೆಯಾಗದಂಥದ್ದು. ಅದಾದ ಮೇಲೆ ಅದೆಷ್ಟೋ ಬಾರಿ ಈ ಕಾಡಿನಲ್ಲಿ ಕೆನ್ನಾಯಿಗಳಷ್ಟೇ ಅಲ್ಲ, ಅದೆಷ್ಟೋ ಪ್ರಾಣಿಗಳ ಕ್ರೌರ್ಯವನ್ನು ಕಂಡಿರುವೆ. ಜಿಂಕೆ, ಕಡವೆ, ಕಾಡುಕುರಿಯಂತಹ ಅಸಹಾಯಕ ಸಾಧು ಪ್ರಾಣಿಗಳ ಆರ್ತನಾದ ನನ್ನನ್ನು ತಲ್ಲಣಿಸುವಂತೆ ಮಾಡಿವೆ.

ಬರುಬರುತ್ತಾ ಅಂತಹ ಘಟನೆಗಳಿಂದ ತರಪೇತುಗೊಂಡಂತೆ, ಅಂತಹ ಸನ್ನಿವೇಶಗಳನ್ನು ನೋಡಿ ನೋಡಿ ಅಭ್ಯಾಸವಾದಂತೆನಿಸಿ ನಾನೆಂದೂ ಆ ಬಗ್ಗೆ ಹೆಚ್ಚಿಗೆ ಯೋಚಿಸುವುದಿಲ್ಲ. ನಾಡಿನ ಜನಗಳ ಮಧ್ಯೆಯೂ ಹೀಗೇ ಅಲ್ಲವೇ? ಜನರ ಕ್ರೌರ್ಯ, ದಾರ್ಷ್ಟ್ಯಗಳನ್ನು ನೋಡಿ ಅನುಭವಿಸಿ ಏನೂ ಮಾಡಲಾಗದ್ದರಿಂದ ಯಾವ ಘೋರದೃಶ್ಯವೂ ಒಳಮನಸ್ಸಿಗೆ ತಟ್ಟದಷ್ಟು ನಿರ್ಭಾವುಕತೆ ಆವರಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**